



# ಕಬ್ಬಿಣ ಸತ್ವದ ಕಬ್ಬಿನಹಾಲು

ಕಬ್ಬಿನ ಹಾಲು ಕುಡಿಯಲು ರುಚಿ. ದಾಹ ನಿವಾರಕ. ಹಲವು ಆರೋಗ್ಯ ಸಮಸ್ಯೆ ನಿವಾರಿಸುವ ಗುಣ ಹೊಂದಿದ ಕಬ್ಬಿನಹಾಲು ಉತ್ತಮ ಪಾನೀಯ.

ಕಬ್ಬಿನಹಾಲಿಗೆ ಸ್ವಲ್ಪ ಲಿಂಬೆರಸ, ಶುಂಠಿ ಸೇರಿಸಿ ಕುಡಿದರೆ ರುಚಿಯೂ ಹೆಚ್ಚು, ಜೀರ್ಣಕ್ಕೂ ಒಳ್ಳೆಯದು. ಬಿಸಿಲ ಧಗೆ ನಿವಾರಣೆಗೆ ತಂಪುಪಾನೀಯ ಕುಡಿಯುವ ಬದಲಾಗಿ ಕಬ್ಬಿನಹಾಲು ಕುಡಿದರೆ ಹಲವು ಪ್ರಯೋಜನಗಳನ್ನು ಕಾಣಬಹುದು. ಇದರಲ್ಲಿರುವ ಕಾರ್ಬೋಹೈಡ್ರೇಟ್ಸ್, ಪ್ರೊಟೀನ್, ಕಬ್ಬಿಣದ ಅಂಶ, ಪೊಟಾಶಿಯಂನಂತಹ ಪೋಷಕಾಂಶಗಳು ನಮ್ಮ ಆರೋಗ್ಯವನ್ನು ಸದೃಢವಾಗಿಸಲು ಸಹಕರಿಸುತ್ತದೆ.

ನಾರಿನ ಅಂಶವನ್ನೂ ಕಬ್ಬಿನಹಾಲು ಹೊಂದಿದೆ ಅಲ್ಲದೆ ಅತ್ಯಧಿಕ ಕಬ್ಬಿಣ ಅಂಶ ಹೊಂದಿರುವ ಇದು ಅನೀಮಿಯ ಸಮಸ್ಯೆ ಇದ್ದವರಿಗೆ ರಾಮಬಾಣ. ಜೈವಿಕ ಲವಣ, ಪೋಷಕಾಂಶಗಳೂ ಹೇರಳವಾಗಿರುವುದರಿಂದ ಮಕ್ಕಳ ಆರೋಗ್ಯ ಸುಧಾರಣೆಗೆ ಅತ್ಯುತ್ತಮ ಸಾಧನ.

## ಪ್ರಯೋಜನ ಹತ್ತಾರು

- ಒಂದು ಲೋಟ ಕಬ್ಬಿನ ಹಾಲಿಗೆ ಎರಡು ಚಮಚ ಜೇನುತುಪ್ಪ ಸೇರಿಸಿ ದಿನಕ್ಕೆ ಎರಡು ಬಾರಿ ಕುಡಿಯುವುದರಿಂದ ಮೂತ್ರಪಿಂಡಗಳು ಸರಿಯಾಗಿ ಕಾರ್ಯನಿರ್ವಹಿಸುತ್ತವೆ.
- ಕಾಮಾಲೆ (ಜಾಂಡೀಸ್) ರೋಗ ಇದ್ದವರು ಕಬ್ಬಿನಹಾಲು ಕುಡಿದರೆ ಬೇಗನೆ ವಾಸಿಯಾಗುತ್ತದೆ.
- ನಾಲ್ಕು ಲೋಟ ಕಬ್ಬನ ರಸಕ್ಕೆ ನಾಲ್ಕು ಲೋಟ ಎಳನೀರು ಸೇರಿ ನಿಂಬೆರಸ, ಶುಂಠಿ ರಸ ಸೇರಿಸಿ ಕುಡಿಯುವುದರಿಂದ ಮೂತ್ರದ ಸಮಸ್ಯೆ ನಿವಾರಣೆಯಾಗುತ್ತದೆ.
- ಕಬ್ಬಿನ ಹಾಲಿಗೆ ಹುರಿದ ಕಪ್ಪು ಎಳ್ಳನ್ನು ಪುಡಿ ಮಾಡಿ ಸೇರಿಸಿ ಕುಡಿಯುವುದರಿಂದ ಹೃದಯ ಬೇನೆ ದೂರವಾಗುತ್ತದೆ. ನರದ ದೌರ್ಬಲ್ಯ ಇದ್ದರೆ ನಿವಾರಣೆಯಾಗುತ್ತದೆ.
- ಕಬ್ಬಿನ ಹಾಲಿನಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳು ದೇಹದ ಹಲವಾರು ಸೋಂಕುಗಳ ವಿರುದ್ಧ ಹೋರಾಡುವ ಗುಣ ಹೊಂದಿರುವುದಲ್ಲದೆ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಗುಣವನ್ನೂ ಹೊಂದಿದೆ.
- ಕಬ್ಬಿನ ಹಾಲಿನ ಸೇವನೆಯಿಂದ ರಕ್ತದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಪ್ರಮಾಣ ಕಡಿಮೆಯಾಗುತ್ತದೆ. ಇದರ ಜೊತೆಗೆ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ.
- ಕಬ್ಬಿನ ಹಾಲಿನ ಸೇವನೆಯು ಕ್ಯಾಲ್ಸಿಯಂ ಮೂಳೆ ಮತ್ತು ಹಲ್ಲುಗಳನ್ನು ದೃಢಗೊಳಿಸಲು ನೆರವಾಗುತ್ತದೆ.
- ಕಬ್ಬಿನ ಹಾಲು ಉಷ್ಣ ಪ್ರಕೃತಿ ಹೊಂದಿದ್ದರೂ ನಮ್ಮ ದೇಹಕ್ಕೆ ಅತಿ ಉಷ್ಣವಾದಾಗ ತಾಜಾ ಕಬ್ಬಿನಹಾಲು ಸೇವನೆಯಿಂದ ದೇಹ ಸಮಸ್ಥಿತಿಗೆ ಬರಲು ನೆರವಾಗುತ್ತದೆ.
- ಕಬ್ಬಿನಹಾಲು ನಿದ್ರಾಹೀನತೆ ದೂರ ಮಾಡುವುದಲ್ಲದೆ ದೇಹದ ಒತ್ತಡವನ್ನು ನಿವಾರಿಸುತ್ತದೆ.

■ ಯು. ಎ.

### ಸೌಂದರ್ಯಕ್ಕೂ ಕಬ್ಬಿನಹಾಲು

ಸೌಂದರ್ಯವರ್ಧನೆಗೆ ಕಬ್ಬಿನಹಾಲಿನ ಪಾತ್ರವೂ ಅಪಾರ. ಕಬ್ಬಿನ ರಸದ ಸೇವನೆಯಿಂದ ಮೊಡವೆಗಳು ದೂರವಾಗುತ್ತವೆ. ಇದರಲ್ಲಿರುವ ಆಲ್ಫಾಹೈಡ್ರಾಕ್ಸಿ ಆಮ್ಲ ದೇಹದಲ್ಲಿ ಬಿಳಿರಕ್ತಕಣಗಳ ಸಂಖ್ಯೆ ಹೆಚ್ಚು ಮಾಡುತ್ತದೆ. ಹೀಗಾಗಿ ಕಬ್ಬಿನ ಹಾಲಿನ್ನು ನಿಯಮಿತವಾಗಿ ಸೇವಿಸಿದರೆ ಬಿಳಿ ರಕ್ತಕಣಗಳು ದೇಹದಿಂದ ಕಲ್ಮಶಗಳನ್ನು ಹೊರಹಾಕಲು ನೆರವಾಗುತ್ತದೆ.

ತ್ವಚೆಯಲ್ಲಿನ ನಿರ್ಜೀವ ಕಣಗಳನ್ನು ಸಹ ಹೋಗಲಾಡಿಸಿ ನಯಗೊಳಿಸುತ್ತದೆ. ಅಲ್ಲದೆ ತ್ವಚೆಯ ತಳಭಾಗದಲ್ಲಿ ಸಂಗ್ರಹವಾಗಿದ್ದ ಸೋಂಕುಗಳಂತಹ ಬೇಡದ ವಸ್ತುವನ್ನು ನಿವಾರಿಸಿ ಮೊಡವೆಗಳನ್ನು ಕಡಿಮೆ ಮಾಡುತ್ತದೆ.

ಸರ್ವೇಜನಃ ಸುಖಿನೋ ಭವಂತುಃ
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.